**ಎಂವಿಸಿ. 1177/2020**

**ಸಾಕ್ಷಿಯನ್ನು ದಿನಾಂಕ 10.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ನಾನು ಪೊಲೀಸ್ ಮೇಲಾಧಿಕಾರಿಗೆ ಯಾವುದೇ ದೂರು ದಾಖಲಿಸಿಲ್ಲ. ಅಪಘಾತವಾದ ದಿನ ಅರ್ಜಿದಾರರೆ ವಾಹನ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರ ತಪ್ಪಿಸಬೇಕೆಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೂರು ದಾಖಲಿಸಿದ ಮಹಮದ್ ಷಫಿ ಮತ್ತು 1 ನೇ ಎದುರುದಾರರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಮಹಮದ್ ಷಫಿ ರವರ ಪಾಟೀ ಸವಾಲಿನಲ್ಲಿ 1 ನೇ ಎದುರುದಾರರು ಗೊತ್ತಿರುವುದಾಗಿ ಅವರು ಹೇಳಿದ್ದಾರೆ. 1 ನೇ ಎದುರುದಾರರು ಹಾಸನ ಜಿಲ್ಲೆಯವರಾಗಿದ್ದು, ಮಹಮದ್ ಷಫಿ ಮಾಯಸಂದ್ರ ತಾಲ್ಲೂಕಿನವರಾಗಿದ್ದರಿಂದ ಅವರಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಅವರ ತಪ್ಪಿನಿಂದ ಅಪಘಾತ ವಾಗಿದೆ ಎಂದು ನ್ಯಾಯಾಲಯದಲ್ಲಿ ಒಪ್ಪಿಕೊಂಡಿದ್ದಾರೆಂದರೆ ಗೊತ್ತಿಲ್ಲ. ಕಾರು ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿದರೆ ನಾವು ಪೊಲೀಸ್ ಮೇಲಾಧಿಕಾರಿಗಳಿಗೆ ದೂರು ದಾಖಲಿಸುತ್ತಿದ್ದೆವು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ತಪ್ಪಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).

ಸಾ.ಓ.ಹೇ.ಕೆ.ಸ.ಇ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ